**ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಗಾಯತ್ರಿನಗರ ವಾರ್ಡ್-76ರಲ್ಲಿ ದಿನಾಂಕ: 16-01-2021 ರಂದು ನಡೆದ ವಾರ್ಡ್ ಸಮಿತಿ ಸಭೆಯ**

***ಸಭಾ ನಡವಳಿಗಳು.***

**ವಾರ್ಡ್ ಸಂಖ್ಯೆ-76 ಗಾಯತ್ರಿನಗರ** **ಸಮಯ ಬೆಳಿಗ್ಗೆ 11:00 ಘಂಟೆಗೆ**

ದಿನಾಂಕ: 16-01-2021 ರಂದು ವಾರ್ಡ್ ಸಂಖ್ಯೆ: 76ರ ಜನವರಿ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 76ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಯಕೊಂಡು ಸಭೆ ನಡೆಸಲು ಕೋರಿದರು.

**ಸಭೆಗೆ ಹಾಜರಿದ್ದವರು :**

| | |
|---|---|
| 1 | ಶ್ರೀ ಚಂದ್ರಶೇಖರ್. ಹೆಚ್.ಆರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್-76ಗಾಯತ್ರಿನಗರ |
| 2 | ಶ್ರೀ ಚಿಕ್ಕಗೂಳಿಗೌಡ.ಜೆ.ಜಿ, ಸಹಾಯಕ ಅಭಿಯಂತರರು, ವಾರ್ಡ್-76ಗಾಯತ್ರಿನಗರ ಹಾಗೂ ಕಾರ್ಯದರ್ಶಿ |
| 3 | ಶ್ರೀ ಕನಕರಾಜು, ಕಂದಾಯ ಪರಿವೀಕ್ಷಕರು |
| 4 | ಶ್ರೀ ಕೆ ಗೋವಿಂದರಾಜು, ಸ್ಯಾನಿಟರಿ ದಫೇದರ್, ಬಿಬಿಎಂಪಿ |
| 5 | ಡಾ॥ ಅಂಜನಾ, ಆರೋಗ್ಯ ಅಧಿಕಾರಿ |
| 6 | ಶ್ರೀ ಆರ್.ಸಂತೋಷ್, ಕೆಲಸ ಪರಿವೀಕ್ಷಕರು |
| 7 | ಶ್ರೀ ಪಿ.ವೆಂಕಟೇಶ್, ಎಲೆಕ್ಟ್ರಿಕಲ್ ಗುತ್ತಿಗೆದಾರರು |
| 8 | ಶ್ರೀ ಮಂಜುನಾಥ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 9 | ಶ್ರೀ ಪ್ರದೀಪ್, ಮೇಲ್ವಿಚಾರಕರು |
| 10 | ಶ್ರೀ ರಂಗನಾಥ್, ಬೆಸ್ಕಾಂ, ಜೆ.ಇ |
| 11 | ಶ್ರೀ ಸಿದ್ದರಾಜು, ಬಿ.ಡಬ್ಲ್ಯೂಎಸ್ಎಸ್‌ಬಿ |
| 12 | ಶ್ರೀ ಕೊಂಡಯ್ಯ, ಆರೋಗ್ಯ ಪರಿವೀಕ್ಷಕರು |
| 13 | ಶ್ರೀ ಹರೀಶ್, ಮಾರ್ಷಲ್ |

Scanned with CamScanner

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀ ಚಂದ್ರಶೇಖರ್.ಹೆಚ್.ಆರ್ ನೋಡಲ್ ಅಧಿಕಾರಿಗಳು ವಾರ್ಡ್-76 ಇವರು ಸಭೆಯನ್ನು ಮುಂದುವರೆಸಲು ಸೂಚಿಸಿದರು.

**ಆರೋಗ್ಯ ಇಲಾಖೆ:**

- ಸಭೆಯಲ್ಲಿ ಹಾಜರಿದ್ದ, ಆರೋಗ್ಯ ಅಧಿಕಾರಿಗಳು ವ್ಯಾಕ್ಸಿನೇಷನ್ ನೀಡಲು ಕ್ರಮಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಕೋವಿಡ್-19 ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಪಾಸಿಟಿವ್ ಪ್ರಕರಣಗಳು ಕಮ್ಮಿಯಾಗಿದೆಯೆಂದು ಸಭೆಯಲ್ಲಿ ತಿಳಿಸಿದರು.
- ನಾಗಪ್ಪ ಬ್ಲಾಕ್‌ನ ಆಸ್ಪತ್ರೆಯಲ್ಲಿ ವ್ಯಾಕ್ಸಿನೇಷನ್‌ನ್ನು ಶೇಖರಿಸಲು ಕ್ರಮಕೈಗೊಳ್ಳಲಾಗುತ್ತಿದೆ ಎಂದು ಸಭೆಯಲ್ಲಿತಿಳಿಸಿದರು.
- ವಿಧ್ಯಾರ್ಥಿಗಳಿಗೆಸಿಂಪ್ಟಮ್ಸ್ ಇರುವವರಿಗೆ ಕೋವಿಡ್ ಪರೀಕ್ಷೆ ನಡೆಸಲಾಗುತ್ತಿದೆ. ಎಂದು ತಿಳಿಸಿದರು.

**ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆ:**

- ರಸ್ತೆಗಳನ್ನು ಕತ್ತರಿಸಿದ ನಂತರ ರಿಸ್ಟೋರೇಷನ್ ಮಾಡುವಾಗ ಬೇಕಾದಷ್ಟು ವೆಟ್‌ಮಿಕ್ಸ್‌ನ್ನು ತರಿಸಿಕೊಂಡು ರಿಸ್ಟೋರೇಷನ್ ಮಾಡುವಂತೆ ಸಭೆಯಲ್ಲಿ ಸೂಚಿಸಲಾಯಿತು.

**ಬೆಸ್ಕಾಂ ವಿಭಾಗ**

- ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳು ಯಾವುದೇ ದೂರುಗಳಿಲ್ಲವೆಂದು ಸಭೆಯಲ್ಲಿ ತಿಳಿಸಿದರು.

**ಕಂದಾಯ ಇಲಾಖೆ**

- ಕಂದಾಯ ಇಲಾಖೆಯ ಕಂದಾಯ ವಸೂಲಿಯನ್ನು ತ್ವರಿತವಾಗಿ ವಸೂಲಿ ಮಾಡುವಂತೆ ಸಭೆಯಲ್ಲಿ ಸೂಚಿಸಲಾಯಿತು. ದಿನಾಂಕ: 04.01.2021 ರಿಂದ 15.01.2021ರ ವರೆಗೆ ರೂ. 1,46,268/-ಕಲೆಕ್ಷನ್ ಮಾಡಿದ್ದು, ಇನ್ನು ರೂ. 82.88 ಲಕ್ಷಗಳನ್ನು ವಸೂಲಿ ಮಾಡಬೇಕಾಗಿದ್ದು, ಕಂದಾಯ ವಸೂಲಿ ಕಮ್ಮಿಯಾಗಿದ್ದು, ಅತೀ ಜರೂರಾಗಿ ವಸೂಲು ಮಾಡುವಂತೆ ಸಭೆಯಲ್ಲಿ ಸೂಚಿಸಲಾಯಿತು.

**ಪೊಲೀಸ್ ಇಲಾಖೆ:**

- ವಾರ್ಡಿನ ರೈಲ್ವೆ ಸಮಾನಂತರ ರಸ್ತೆಯಲ್ಲಿರುವ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಪಕ್ಕದಲ್ಲಿ ಸಾರ್ವಜನಿಕರು ವಾಹನಗಳನ್ನು ನಿಲ್ಲಿಸುತ್ತಿದ್ದು, ವಾಹನಗಳನ್ನು ನಿಲ್ಲಿಸುತ್ತಿರುವುದನ್ನು ತಡೆಗಟ್ಟಲು ಪೊಲೀಸ್ ಅಧಿಕಾರಿಗೆ ಸಭೆಯಲ್ಲಿ ಸೂಚಿಸಲಾಯಿತು.

Scanned with CamScanner

**ಆರೋಗ್ಯ ಇಲಾಖೆ (ಘನತ್ಯಾಜ್ಯ) :**

- ಸಭೆಯಲ್ಲಿ ಹಾಜರಿದ್ದ, ಹಿರಿಯ ಆರೋಗ್ಯ ಪರಿವೀಕ್ಷಕರು ಮನೆ ಮನೆಯಿಂದ ಘನತ್ಯಾಜ್ಯವನ್ನು ಪಡೆಯಲಾಗುತ್ತಿದೆ. ಹಾಗೂ ಸಗ್ರಿಗೇಷನ್ ಮಾಡಲಾಗುತ್ತಿದೆ ಎಂದು ತಿಳಿಸಿದರು.

**ಮಾಸ್ಕ್**

- ವಾರ್ಡ್‌ನ ಮಾರ್ಷಲ್‌ಗಳು ಮಾಸ್ಕ್ ಧರಿಸದೇ ಇರುವವರಿಗೆ ದಂಡವನ್ನು ವಿಧಿಸುತ್ತಿದ್ದು, ಸಭೆಯಲ್ಲಿ ಮೆಚ್ಚಿಗೆ ವ್ಯಕ್ತಪಡಿಸಲಾಯಿತು.

SWD

- 11ನೇ ಅಡ್ಡರಸ್ತೆ ಡಿ ಬ್ಲಾಕ್‌ನಲ್ಲಿ ರಾಜಕಾಲುವೆ ಕಾಮಗಾರಿಯು ಪ್ರಗತಿಯಲ್ಲಿದ್ದು, ರಿಸ್ಟೋರೇಷನ್ ಮಾಡುವಂತೆ ಸಭೆಯಲ್ಲಿ ಸೂಚಿಸಲಾಯಿತು.

**ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.**

**ಕಾರ್ಯದರ್ಶಿ,** | **ಅಧ್ಯಕ್ಷರು**

ಸಹಾಯಕ ಅಭಿಯಂತರರು, ವಾರ್ಡ್-76 ಗಾಯತ್ರಿನಗರ, ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ

ನೋಡಲ್ ಅಧಿಕಾರಿಗಳು, ವಾರ್ಡ್-76 ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ

Scanned with CamScanner